


ಎಡದಿಂದ ಬಲಕ್ಕೆ :

1. ಊರಿನ ದಂಪತಿಗಳಿಗೆಲ್ಲ ಅವನೇ ಒಡೆಯ (4)
3. ವಿರಾಮವನ್ನು ಪಡೆಯಲು ತಕ್ಕಂತಿದೆ ನಿಶ್ಶಬ್ದ (3)
4. ಮೊಸರು ಮಾಡುವ ಹಕ್ಕು ಪಡೆಯಲು ಎಂಥ ಶುಲ್ಕ ? (3)
6. ನದೀ ತೀರಕ್ಕೆ ಹೋಗಬೇಕೇ ಬೇಡವೇ ತೀರ್ಮಾನಿಸುವವ ಆತ (4)
7. ಕಲಿಸುವುದೇ ಆಕೆಯ ಕೆಲಸ ಯಾವಾಗಲೂ (4)
8. ಅವನನ್ನು ಸುಮ್ಮನಾಗು ಎಂದದ್ದಕ್ಕೆ ಈ ಮಂದಹಾಸ (4)
10. ನಾವೆಯಲ್ಲಿದ್ದ ಕವಿ ರಚಿಸಿದ್ದು 'ಹೊಸಕಾಲದ ಪದ್ಯ' (4)
12. ಪರಕೀಯರ ಹಾವಳಿಯನ್ನು ತಪ್ಪಿಸಲು ತಕ್ಕ ಸಾಧನವೂ ಹೀಗೆ (4)
14. ಆತನ ಮನೆಯ ಕೆಲಸಕ್ಕೆ ಬಂದಿರುವಾತ ತೀರ ಮುಗ್ಧ (4)
16. ಸುಳ್ಳಿನ ಜಾಲದಿಂದ ಹೇಗಾದರೂ ತಪ್ಪಿಸಿಕೋ (3)
17. ಹಾರುವ ವಾಹನವನ್ನೇರಿ ವಿನೋದಕ್ಕೆಂದು ಸಂಚರಿಸುವವ ಹೇಗೆ?(3)
18. ಕೊಟ್ಟಿಲ್ಲ , ತೆಗೆದಿಲ್ಲ. ಬರೀ ಮೋಸ , ವಂಚನೆ (4)

ಮೇಲಿಂದ ಕೆಳಕ್ಕೆ :

1. ಅವನಿಗೂ ಇವನಿಗೂ ಎಲ್ಲರಿಗೂ ಇದೊಂದೇ ಭೂಮಿ (3)
2. ಎಲ್ಲರನ್ನೂ ಕರೆತಂದವನು ಒಬ್ಬ ಅಲೆಮಾರಿ (3)
3. ನಾಳಿನ ಕಾರ್ಯಕ್ಕೆ ತಕ್ಕಂತೆ ಆತನದು ಎತ್ತರದ ಶರೀರ (4)
5. ಮೊಸಳೆಯನ್ನು ಹಿಂಸಿಸಿದ್ದಕ್ಕೆ ಭಾರೀ ಕೋಪ (3)
7. ದಾಸ್ಯವನ್ನು ದೂರ ಮಾಡಿದ ನಂತರವಷ್ಟೇ ನೆಮ್ಮದಿ (4)
9. ಗುರುತಿಲ್ಲದವರಿಗೆ ಈ ಹೊಣೆಗಾರಿಕೆ ತುಂಬ ದೊಡ್ಡದು ಅಲ್ಲವೇ? (4)
11. ಕೋವಿಯನ್ನು ಕೊಳ್ಳಲು ಶಾಸನಬದ್ಧ ನಿಯಮ ಏನು ? (3)
13. ಆ ಸೋದರಿಯರು ನಡೆಯುತ್ತಿರುವುದು ಚೂರೂ ತಪ್ಪಿಲ್ಲದ ಹಾದಿ (4)
14. ಆಕಳನ್ನು ಸಾಕಲು ತುಂಬ ಭಯ , ಹಿಂಜರಿತ (3)
15. ಕತೆಗೇ ಅಳವಡಿಸಿದಂತೆ ಒಂದು ಸುಂದರ ಪದ್ಯ (3)

### 03-11-2016ರ ಉತ್ತರಗಳು

ಎಡದಿಂದ ಬಲಕ್ಕೆ :

1. ಪ್ರಗತಿ ; 3. ಅನಾಥ ; 4. ಲಹರಿ ; 6. ಹಿಂಬಾಲಕ ; 7. ಶುಭಕರ ; 9. ದಿನಕರ ; 11. ನಾಡಗೀತೆ ; 15. ರಕ್ಷಕಿ ; 16. ಕರಾರು ; 17. ತರ್ಕಾರಿ

ಮೇಲಿಂದ ಕೆಳಕ್ಕೆ :

1. ಪ್ರಥಮ 2. ತಿಲಕ 3. ಅಕಾಲ 5. ರಿಷಭ 6. ಹಿಂಬದಿ 8. ರಮ್ಯತೆ ; 10. ಕಠೋರ ; 12. ಡಮರು ; 13. ಅಂಕಿತ; 14. ಬೇಕರಿ

## ಪ್ರಶ್ನಾ ೦ಕಣ

# ಆಬ್ಸೀಡಿಯಾನ್: ಏನು ವಿಶೇಷ?

ಆಬ್ಸೀಡಿಯಾನ್ ಅದೊಂದು ಅಗ್ನಿ ಶಿಲೆ. ಹಾಗೆಂದರೆ ಅದೊಂದು ಜ್ವಾಲಾಮುಖಿ ಜನ್ಯ ಶಿಲೆ. ಆದರೂ ಇತರೆಲ್ಲ ಅಗ್ನಿ ಶಿಲೆಗಳಿಂದ ಆಬ್ಸೀಡಿಯಾನ್ ಸಂಪೂರ್ಣ ವಿಭಿನ್ನ. ಹೇಗೆಂದರೆ ಅದರದು ಗಾಜಿನಂತಹ ನಯವಾದ ಮೇಲ್ಮೈ ; ಅಂತಹದೇ ನುಣುಪು , ಹೊಳಪು. ಗಾಜಿನಂತೆಯೇ ಜೋರಾಗಿ ತಾಗಿದರೆ, ಬಿದ್ದರೆ , ಕುಟ್ಟಿದರೆ ಚೂಪು ಚೂಪಾದ ಅಂಚುಗಳೊಡನೆ ಚಿತ್ರ ವಿಚಿತ್ರವಾಗಿ ಚೂರು ಚೂರಾಗುವ ಸ್ವಭಾವ. ವಾಸ್ತವವಾಗಿ ಅರೆ ಪಾರದರ್ಶಕ ಗುಣದ ಈ ಶಿಲೆ ಗಾಜನ್ನು ಎಷ್ಟೆಲ್ಲ ಹೋಲುತ್ತದೆಂದರೆ ಅದು 'ನೈಸರ್ಗಿಕ ಗಾಜು' ಎಂದೇ ಹೆಚ್ಚು ಪ್ರಸಿದ್ಧ (ಚಿತ್ರ 1).

ಆಬ್ಸೀಡಿಯಾನ್ ಗೆ ಈ ಎಲ್ಲ ವಿಶೇಷ ಗುಣಗಳು ಬರಲು ಕಾರಣ ಅದು ಮೈದಳೆವ ವಿಧಾನ. ಶೇಕಡ ಎಪ್ಪತ್ತಕ್ಕೂ ಹೆಚ್ಚಿನ ಪ್ರಮಾಣದ ಸಿಲಿಕಾ ದಿಂದ ಕೂಡಿದ ಗಟ್ಟಿ ಶಿಲಾಪಾಕ ಅಗ್ನಿ ಪರ್ವತಗಳಿಂದ ಉಕ್ಕಿ ಅಥವಾ ಚಿಮ್ಮಿ (ಚಿತ್ರ 2,3) ನೆಲದ ಮೇಲೆ ಪ್ರವಹಿಸುವಾಗ ಕೆಲವು ಸಂದರ್ಭಗಳಲ್ಲಿ ಅಂತಹ ಪ್ರವಾಹಗಳ ಅಂಚುಗಳಲ್ಲಿ ಲಾವ ಕ್ಷಿಪ್ರವಾಗಿ ತಣಿಯುತ್ತದೆ, ಕಲ್ಲಾಗುತ್ತದೆ. ಹಾಗೆ ರೂಪುಗೊಳ್ಳುವ ಶಿಲೆಯೇ ಆಬ್ಸೀಡಿಯಾನ್. ಬಹು ಬೇಗ ಘನ ರೂಪ ತಳೆಯುವುದರಿಂದ ಆಬ್ಸೀಡಿಯಾನ್ ನಲ್ಲಿನ ದ್ರವ್ಯ ಹರಳುಗಳ ರೂಪ ತಾಳಿರುವುದಿಲ್ಲ. ಆದ್ದರಿಂದಲೇ ಈ ಶಿಲೆಗಾಗಲೀ ಅದರ ಚೂರುಗಳಿಗಾಗಲೀ ಯಾವುದೇ ನಿರ್ದಿಷ್ಟ ಆಕಾರ ಇಲ್ಲ.

ಆಬ್ಸೀಡಿಯಾನ್ ನಲ್ಲಿ ಸಿಲಿಕಾದ ಅಂಶವೇ ಅತ್ಯಧಿಕವಾದರೂ ಉಳಿದದ್ದರಲ್ಲಿ ಮೆಗ್ನೀಶಿಯಂ ಮತ್ತು ಕಬ್ಬಿಣದ ಆಕ್ಸೈಡ್ ಗಳು ಪ್ರಮುಖ. ಈ ಶಿಲೆಯದು ಸರ್ವೇ ಸಾಮಾನ್ಯವಾಗಿ ಗಾಢ ಕಪ್ಪು ಅಥವಾ ಗಾಢ ಕಂದು ಬಣ್ಣ (ಚಿತ್ರ 1). ಆದರೂ ಕೆಲವಾರು ನಿರ್ದಿಷ್ಟ ಖನಿಜಗಳು ಬೆರೆತಿದ್ದರೆ ಅಪರೂಪವಾಗಿ ಹಸಿರು, ಹಳದಿ, ಕೆಂಪು ಮತ್ತು ನೀಲಿ ಬಣ್ಣಗಳ ಈ ಶಿಲೆಗಳೂ ಕಾಣಸಿಗುತ್ತವೆ. ಇನ್ನೂ ಅಪರೂಪವಾಗಿ ಈ ಶಿಲೆಗಳ ತನುವಿನೊಳಗೇ ಉಳಿವ ನೀರಾವಿ ಮತ್ತಿತರ ಅನಿಲ ಗುಳ್ಳೆಗಳು ಚುಕ್ಕಿ , ಮಚ್ಚೆ ಇತ್ಯಾದಿ ವಿವಿಧ ಚಿತ್ತಾರಗಳನ್ನೂ ಮೂಡಿಸುತ್ತವೆ. ಅತಿ ವಿಶೇಷ ಏನೆಂದರೆ ಆಬ್ಸೀಡಿಯಾನ್ ನಿಧಾನವಾಗಿ ತಂತಾನೇ ಆಂತರ್ಯದಲ್ಲಿ ಹರಳಿನ ರೂಪಕ್ಕೆ ಮಾರ್ಪಡುತ್ತ, ಲಕ್ಷಾಂತರ ವರ್ಷಗಳಲ್ಲಿ ತನ್ನ ಗಾಜಿನ ಗುಣಗಳನ್ನು ಕಳೆದುಕೊಳ್ಳುತ್ತದೆ.




ಪುರಾತನ ಕಾಲದಿಂದಲೂ ಆಬ್ಸೀಡಿಯಾನ್ ಆಯುಧ ವಸ್ತುವಾಗಿ ಬಹಳ ಜನಪ್ರಿಯ. ಶಿಲಾಯುಗದ ಮನುಷ್ಯರೇ ಆಬ್ಸೀಡಿಯಾನ್ ಅನ್ನು ಮುರಿದು ಪಡೆದ ಚೂರುಗಳನ್ನು ಚಾಕು, ಚೂರಿಗಳಂತೆ ಬಳಸುತ್ತಿದ್ದರು. ಈಗಲೂ ಆಬ್ಸೀಡಿಯಾನ್ ನ ಚಾಕುಗಳು ಮತ್ತು ಬಾಕುಗಳು ತಯಾರಾಗುತ್ತಿವೆ. ವಾಸ್ತವವಾಗಿ ಈ ಶಿಲೆಯ ಚಾಕುಗಳು ಉಕ್ಕಿನ ಚಾಕುಗಳ ಹತ್ತು ಮಡಿ ಹರಿತವಾಗಿರುತ್ತವೆ !

ಬಣ್ಣ ಬಣ್ಣದ ಆಬ್ಸೀಡಿಯಾನ್ ನಿಂದ ತಯಾರಿಸುವ ಮಣಿಗಳು ಆಭರಣ ಯೋಗ್ಯ ಕೂಡ. ಆದರೆ ಅದರ ಮೆದು ಸ್ವಭಾವದಿಂದ ಈ ಶಿಲೆಯ ಮಣಿಗಳು ಬಹು ಸುಲಭವಾಗಿ ಗೀಚು ಗೀಚಾಗುತ್ತವೆ; ಬಿದ್ದರೆ ಮುರಿದು ಹೋಗುತ್ತವೆ. ಹಾಗಾಗಿ ಅವು ರತ್ನ ಸಮಾನ ಸ್ಥಾನ ಪಡೆದಿಲ್ಲ .

■ ಎನ್. ವಾಸುದೇವ್